ಸಮಸ್ತ ಕನ್ನಡಿಗರ ಏಕೈಕ ಸಂಜೆ ದಿನಪತ್ರಿಕೆ

ಈ ಸಂಜೆ

Wednesday, December 7, 2011

# ಸಿಎಂಎಸ್ ಉತ್ಸವ

**ಬೆಂಗಳೂರು, ಡಿ.7–** ಜೈನ್ ವಿಶ್ವವಿದ್ಯಾಲಯ ಹಾಗೂ ಸೆಂಟರ್ ಫಾರ್‌ಮ್ಯಾನೇಜ್‌ಮೆಂಟ್ ಸ್ಟಡೀಸ್ ಶೈಕ್ಷಣಿಕ ಹಾಗೂ ಮನರಂಜನೆ ಸಂಯೋಜನೆಯೊಂದಿಗೆ ಸಿ ಎಂ ಎಸ್ ಉತ್ಸವ ನಡೆಯಲಿದೆ.

ಅಂತರರಾಷ್ಟ್ರೀಯ ರಂಗಭೂಮಿ ಉತ್ಸವ ನಾಳೆ ಮುಕ್ತಾಯಗೊಳ್ಳಲಿದ್ದು ಇದರಲ್ಲಿ ಕನ್ನಡ ಮತ್ತು ಹಿಂದಿಯ ಸಣ್ಣ ನಾಟಕಗಳು ಪ್ರದರ್ಶನಗೊಂಡವು .

ಪ್ರಥಮ ವರ್ಷದ ಮ್ಯಾನೇಜ್‌ಮೆಂಟ್ ಉತ್ಸವ ತ್ರೆಶೋಲ್ಡ್ ಜ.31ರಂದು ನಡೆಯಲಿದೆ.ವ್ಯವಹಾರ ಜಗತ್ತನ್ನು ತನ್ನ ಅಸಂಪ್ರದಾಯಿಕ ಶೈಲಿ,ವಸ್ತು ನಿಷ್ಠತೆ ,ಹಾಗೂ ಸ್ಪರ್ಧೆ ಮತ್ತು ಕಾರ್ಯಕ್ರಮಗಳ ಗುಣಮಟ್ಟದ ಲಕ್ಷಣಗಳ ಆಧಾರದ ಮೇಲೆ ನಿರೂಪಿಸಲಾಗುತ್ತದೆ ಎಂದು ಜೈನ್ ವಿವಿ ತಿಳಿಸಿದೆ.

ಲಾಸ್ಯ ಸಾಂಸ್ಕೃತಿಕ ಉತ್ಸವವು ಫೆ 1 ಮತ್ತು 2 ರಂದು ನಡೆಯಲಿದ್ದು ,ಇದೊಂದು ವಿದ್ಯಾರ್ಥಿಗಳ ನೈಪುಣ್ಯತೆ ಮುಕ್ತ ಅಭಿವ್ಯಕ್ತಿಗೆ ಅವಕಾಶ ಕಲ್ಪಿಸುವ ರಸದೌತಣ ಉಣಬಡಿಸುವ ಸಾಂಸ್ಕೃತಿಗೆ ವೇದಿಕೆಯಾಗಿದೆ.

ಅಂತರಾಷ್ಟ್ರೀಯ ಮ್ಯಾನೇಜ್‌ಮೆಂಟ್ ಉತ್ಸವ ಪ್ರೆಸಿಪಿಸ್ ಫೆ.18 ರಿಂದ 24 ರವರೆಗೆ ನಡೆಯಲಿದೆ ಎಂದು ವಿವಿ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದೆ.